Sri. R. B. Thimmapur (Minister of State for agricultural Marketing) :

a) Yes.

b) In G.O. dated 30.9.2000 the Government have ordered to open the Purchase Centres to purchase the maize by the KSCMF Ltd, Bangalore. In letter dated 17.10.2000 the Secretary APMC, Periyapatna has requested the M.D. KSCMF Ltd, Bangalore to open the Purchase Centre to purchase maize under the support price.

c) 18 purchase Centres have been opened and 19260 quintals of maize purchased.

ರಾಜ್ಯ ವಿಧಾನಸಭಾ ಕ್ಷೇತ್ರಗಳಲ್ಲಿನ ಆಶ್ರಯ ಸಮಿತಿಗಳ ರಚನೆ

2983 - ಶ್ರೀ ಬಚ್ಚೇಗೌಡ ಬಿ.ಎನ್ (ಹೊಸಕೋಟೆ) : ಮಾನ್ಯ ವಸತಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) *ರಾಜ್ಯದ ಎಲ್ಲಾ ವಿಧಾನ ಸಭಾ ಕ್ಷೇತ್ರಗಳಲ್ಲಿ ಆಶ್ರಯ ಸಮಿತಿ ರಚಿಸಲಾಗಿದೆಯೇ ?*

ಆ) *2000-2001ನೇ ಸಾಲಿನಲ್ಲಿ ಇದುವರೆವಿಗೂ ಆಶ್ರಯ ಅಂಬೇಡ್ಕರ್ ಹಾಗೂ ಇಂದಿರಾ ಆವಾಜ್ ವಸತಿ ಯೋಜನೆಯಲ್ಲಿ ಪ್ರತಿ ವಿಧಾನ ಸಭಾ ಕ್ಷೇತ್ರಕ್ಕೆ ಮಂಜೂರಾಗಿರುವ ಮನೆಗಳ ಸಂಖ್ಯೆ ಎಷ್ಟು ?*

ಇ) *ಆಶ್ರಯ ಅಂಬೇಡ್ಕರ್ ಮತ್ತು ಇಂದಿರಾ ಆವಾಜ್ ಮನೆಗಳಿಗೆ ಇದುವರೆವಿಗೂ ಬಿಡುಗಡೆಯಾಗಿರುವ ಹಣವೆಷ್ಟು ? ಇನ್ನೂ ಎಷ್ಟು ಹಣ ಬಾಕಿ ಇದೆ ?*

ಈ) *ರಾಜೀವ್ ಗಾಂಧಿ ವಸತಿ ನಿಗಮ ಈಗ ಅಸ್ತಿತ್ವದಲ್ಲಿದೆಯೇ ?*

ಉ) *ಹಾಗಿದ್ದಲ್ಲಿ ಈ ಸಂಸ್ಥೆಯ ರೂಪರೇಷೆಗಳೇನು ?*

ಶ್ರೀ ಖಮರುಲ್ ಇಸ್ಲಾಂ (ವಸತಿ ಸಚಿವರು) :

ಅ) ಗ್ರಾಮೀಣ ಆಶ್ರಯ ಸಮಿತಿಗಳ ರಚನೆ ಪೂರ್ಣವಾಗಿವೆ, ನಗರ ಆಶ್ರಯ ಸಮಿತಿಗಳಲ್ಲಿ 5 ಮಾತ್ರ ಬಾಕಿ ಇದೆ.

ಆ)	ಆಶ್ರಯ	ಅಂಬೇಡ್ಕರ್	ಇಂದಿರಾ ಆವಾಜ್
	1.55.000	19.442	31.456

ಇ)	ಆಶ್ರಯ	ಅಂಬೇಡ್ಕರ್	ಇಂದಿರಾ ಆವಾಜ್
	5581.04 ಲಕ್ಷಗಳು	1263.00 ಲಕ್ಷಗಳು	3145.89 ಲಕ್ಷಗಳು

ಈ) ಹೌದು.

ಉ) ಈ ನಿಗಮವನ್ನು ರಾಜ್ಯದ ಆರ್ಥಿಕವಾಗಿ ಹಿಂದುಳಿದ ಜನರಿಗಾಗಿ ಹಮ್ಮಿಕೊಂಡ ಆಶ್ರಯ ಅಂಬೇಡ್ಕರ್ ವಿಶೇಷ ವೃತ್ತಿ ನಿರತದವರಾದ ಹಮಾಲರು, ನೇಕಾರರು, ಮೀನುಗಾರರು ಬೀಡಿ ಕಾರ್ಮಿಕರು ಮುಂತಾದವರಿಗಾಗಿ ಇರುವ ವಸತಿ ಯೋಜನೆಗಳನ್ನು ಅನುಷ್ಠಾನಗೊಳಿಸಲು ರಚಿಸಲಾಗಿದೆ. ಈ ನಿಗಮಕ್ಕೆ ಅಧ್ಯಕ್ಷರು, ವ್ಯವಸ್ಥಾಪಕ ನಿರ್ದೇಶಕರು ಹಾಗೂ ಪೂರಕ ಸಿಬ್ಬಂದಿಯಿದ್ದು, ಈ ನಿಗಮದಲ್ಲಿ 3 ಕೋಟಿಗಳ ಶೇರು ಬಂಡವಾಳವನ್ನು ಹೂಡಲಾಗಿದೆ. ಸರ್ಕಾರವು ವಹಿಸಿದೆ ವಸತಿ ಯೋಜನೆಗಳನ್ನು ಸರ್ಕಾರದ ಅನುದಾನವಲ್ಲದೇ ಹುಡ್ಕೋ ಸಂಸ್ಥೆಯಿಂದ ಸಾಲ ಪಡೆದ ಯೋಜನೆಗಳನ್ನು ಅನುಷ್ಠಾನಗೊಳಿಸುವುದು.

ಲಘು ಮೋಟಾರು ವಾಹನಗಳಿಗೆ ಅಡುಗೆ ಅನಿಲ ಅಳವಡಿಸಲು ಪರವಾನಿಗೆ ಕೊಡುವುದು

2984 - ಶ್ರೀ ಬಚ್ಚೇಗೌಡ ಬಿ.ಎನ್. (ಹೊಸಕೋಟೆ) : ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಅಡಿಗೆ ಅನಿಲವನ್ನು ಅಳವಡಿಸಲು ಲಘು ಮೋಟಾರು ವಾಹನಗಳಿಗೆ ಪರವಾನಗಿ ನೀಡಲಾಗಿದೆಯೇ?

ಆ) ಹಾಗಿದ್ದಲ್ಲಿ ಮೋಟಾರು ವಾಹನ ಕಾಯ್ದೆಗೆ ತಿದ್ದುಪಡಿ ತರಲಾಗಿದೆಯೇ?

ಇ) ಪರವಾನಗಿ ಇಲ್ಲದೆ ಲಘು ಮೋಟಾರು ವಾಹನಗಳಿಗೆ ಅಕ್ರಮವಾಗಿ ಅಡಿಗೆ ಅನಿಲವನ್ನು ಉಪಯೋಗಿಸಿರುವ ಪ್ರಕರಣಗಳು ಸರ್ಕಾರದ ಗಮನಕ್ಕೆ ಬಂದಿದೆಯೇ?

ಈ) ಹಾಗಿದ್ದಲ್ಲಿ ಈ ಬಗ್ಗೆ ಸರ್ಕಾರ ಕೈಗೊಂಡಿರುವ ಕ್ರಮಗಳೇನು?

ಉ) ಇತ್ತೀಚೆಗೆ ಬೆಂಗಳೂರು ನಗರದಲ್ಲಿ ಲಘು ವಾಹನಗಳು ಅಡಿಗೆ ಅನಿಲ ಸೋರಿಕೆಯಿಂದ ಮುಂಜಾಗ್ರತೆ ಇಲ್ಲದೆ ನಿರ್ಲಕ್ಷ್ಯದಿಂದ ಬೆಂಕಿ ಹೊತ್ತಿಕೊಂಡು ಸುಟ್ಟಿರುವ ವಾಹನಗಳು ಪ್ರಕರಣಗಳೆಷ್ಟು?

ಶ್ರೀ ಸಿ.ಆರ್. ಸಗೀರ್ ಅಹ್ಮದ್ (ಸಾರಿಗೆ ಸಚಿವರು) :

ಅ) ಇಲ್ಲ.

ಆ) ಇದುವರೆವಿಗೂ ತಿದ್ದುಪಡಿ ಆಗಿರುವುದಿಲ್ಲ.